ರಚನೆ ಮಾಡಿದ್ದೇವೆ ಎಂದು ಹೇಳುತ್ತಿದ್ದೀರಿ. ಹಾಗಾದರೆ ಆ ಸದನದ ಸಮಿತಿಗೆ ಏನು ಕೆಲಸವಿದೆ?

ಶ್ರೀ ವಾಟಾಳ್ ನಾಗರಾಜ್ : ಸರ್ಕಾರ ಸದನದ ಸಮಿತಿಯನ್ನು ಏನು ಮಾಡಿದೆ. ಅದಕ್ಕೆ ಏನಾದರೂ ಗೌರವ ಇದೆಯೇ? ನಾವು ಅದರಲ್ಲಿ ಸದಸ್ಯರಾಗಿದ್ದೇವೆ. ಸದನದ ಸಮಿತಿಯಲ್ಲಿ ಒಂದು ರೀತಿ ತೀರ್ಮಾನವಾಗುತ್ತಿದೆ, ಇನ್ನೊಂದುಕಡೆ ತಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ತಮ್ಮ ಒಂದು ನೀತಿಯನ್ನು ಹೇಳುತ್ತಿದ್ದೀರಿ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಿಗೆ ಈಗಾಗಲೇ ತಿಳಿದಿರುವಂತೆ ರಾಜ್ಯದಲ್ಲಿರುವ ಗ್ರಾನೈಟ್ ನಿಕ್ಷೇಪಗಳನ್ನು ಕಲ್ಲುಗಣಿ ಮಾಡಿ ಹೊರತೆಗೆದು ಸಂಸ್ಕರಿಸಿ ರಫ್ತು ಮಾಡುವ ಮತ್ತು ಅದರ ಬೆಳವಣಿಗೆಯನ್ನು ಕ್ರಮಗೊಳಿಸಿ ವೃದ್ಧಿಗೊಳಿಸುವ ಬಗ್ಗೆ ಸರ್ಕಾರವು ಮಾಡಿದ ಎಲ್ಲಾ ಪ್ರಯತ್ನಗಳು ಒಂದಲ್ಲಾ ಒಂದು ಕಾನೂನು ತೊಡಕಿನಲ್ಲಿ ಸಿಕ್ಕಿಬಿದ್ದಿವೆ. ಜೊತೆಗೆ ಗ್ರಾನೈಟ್ ಡಿಮ್ಮಿಗಳ ಅನಧಿಕೃತ ಕಲ್ಲು ಗಣಿಗಾರಿಕೆ ಹಾಗೂ ಅನಧಿಕೃತ ಸಾಗಾಣಿಕೆ ಇವುಗಳ ಬಗ್ಗೆ ಕೆಲವು ಟೀಕೆಗಳು ಆಗ್ಗಾಗೆ ಬಂದಿವೆ. ನಮ್ಮ ಸರ್ಕಾರ, ಇತ್ತೀಚೆಗೆ ಹಲವಾರು ಕ್ರಮಗಳನ್ನು ಈ ದಿಸೆಯಲ್ಲಿ ತೆಗೆದುಕೊಂಡು ಅನಧಿಕೃತ ಕಲ್ಲು ಗಣಿಗಾರಿಕೆ ಮತ್ತು ಸಾಗಾಣಿಕೆಯ ಮೇಲೆ ಪರಿಣಾಮಕಾರಿಯಾಗಿ ನಿಯಂತ್ರಣ ಸಾಧಿಸಿದೆ ಎಂದು ತಿಳಿಸಲು ಸಂತೋಷಿಸುತ್ತೇನೆ. ಸರ್ಕಾರ ಎಲ್ಲಾ ಉಪ ಖನಿಜ ನಿಕ್ಷೇಪಗಳನ್ನು ಸರಿಯಾದ ರೀತಿಯಲ್ಲಿ ಬಳಸಲು ಒಂದು ಸಮಂಜಸವಾದ ನೀತಿಯನ್ನು ರೂಪಿಸಿ ಸರ್ಕಾರಕ್ಕೆ ಸಲಹೆ ನೀಡಲು ಈಗಾಗಲೇ ಎರಡೂ ಸದನದ ಒಂದು ಜಂಟಿ ಸಮಿತಿಯನ್ನು ದಿನಾಂಕ 24-10-91 ರಂದು ಸರ್ಕಾರವು ರಚಿಸಿದೆ. ಈ ಸದನ ಸಮಿತಿಯು ತಮ್ಮ ಮಧ್ಯಕಾಲಿಕ ವರದಿಯನ್ನು ಸಲ್ಲಿಸಿದ್ದು ಅದರಲ್ಲಿರುವ ಸಲಹೆಗಳನ್ನು ಸರ್ಕಾರವು ಈಗಾಗಲೇ ಕಾರ್ಯರೂಪಕ್ಕೆ ತಂದಿದೆ. ಆದರೆ ಈ ಸಮಿತಿಯು ಇನ್ನು ತನ್ನ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.

ಸಂಸ್ಕರಿಸಿದ ಗ್ರಾನೈಟ್ ಶಿಲೆಗಳನ್ನು ರಫ್ತು ಮಾಡುವ ಉದ್ದೇಶದಿಂದ ಅದರ ಸಂಬಂಧ ಕೈಗಾರಿಕೆ ಬಗ್ಗೆ ಕೇಂದ್ರ ಸರ್ಕಾರವು ಒಂದು ಎಕ್ಸ್‌ಪ್ಟ್ರೀಮ್ ಫೋಕಸ್ ಗ್ರೂಪ್ ಎಂಬ ಸಮಿತಿಗೆ ಒಪ್ಪಿಸಿದೆ. ರಾಜ್ಯದಲ್ಲಿರುವ ಗ್ರಾನೈಟ್ ಸಂಪತ್ತನ್ನು ಗಣನೆಗೆ ತೆಗೆದುಕೊಂಡು ಹಾಗೂ ಈ ಶಿಲೆಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿರುವ ಬೇಡಿಕೆಯನ್ನು ಅದರಲ್ಲಿಯೂ ಸಂಸ್ಕರಣೆ ಮಾಡಿದ ಗ್ರಾನೈಟ್‌ಗೆ ಇರುವ ಬೆಲೆಯನ್ನು ಆಧರಿಸಿ ಎಲ್ಲಾ ದೃಷ್ಟಿಯಿಂದಲೂ ಸಮಗ್ರವಾಗಿ ಪರಿಶೀಲಿಸಿದ ಮೇಲೆ ಒಂದು ಹೊಸ ಗ್ರಾನೈಟ್ ಗಣಿಗಾರಿಕೆಯ ನೀತಿಯನ್ನು ಈಗ ಸರ್ಕಾರವು ರೂಪಿಸಿರುವುದನ್ನು ನಾನು ತಿಳಿಸಲು ಹರ್ಷಿಸುತ್ತೇನೆ. ಈ ನೀತಿಯಲ್ಲಿನ ಮುಖ್ಯ ಉದ್ದೇಶವೇನೆಂದರೆ, ಸಂಸ್ಕರಣೆ ಮಾಡಿದ ಗ್ರಾನೈಟ್ ಶಿಲೆಗಳನ್ನೇ ರಫ್ತು ಮಾಡುವುದು. ಅದಕ್ಕೆ ಹೆಚ್ಚಿನ ಬೆಲೆ ಮತ್ತು ಅದರಿಂದ ದೇಶಕ್ಕೆ ಹೆಚ್ಚು ವಿದೇಶೀನಿಮಯಗಳಿಸುವ ಉದ್ದೇಶವೇ ಆಗಿದೆ. ಇದನ್ನು ಸಾಧಿಸಲು ಕಲ್ಲು ಗಣಿ ಗುತ್ತಿಗೆಗಳಿಗೆ ನೀಡುವ ಅವಧಿಯ ಸಾಕಷ್ಟು ಜಾಸ್ತಿ ಕಾಲಾವಕಾಶ ಇರಬೇಕಾಗುತ್ತದೆ. ಹಾಗೂ ಇದೇ ಸಮಯದಲ್ಲಿ ಶಾಸನ ಮತ್ತು ಸ್ಥಿರ